## ನಿಜಜೀವನದ ತುಣುಕು

‘ನಿಜಾತ್’ (ಅ. 26, ಪದ್ಮಿನಿ ನಾಗರಾಜು) ಕಥೆ ಬಹಳ ಅರ್ಥಗರ್ಭಿತವಾಗಿದೆ. ಹಿರಿಯ ಮಹಿಳೆಯರ ಬದುಕಿನ ಅಲ್ಲೋಲ ಕಲ್ಲೋಲಗಳನ್ನು ಚಿತ್ರಿಸಿದೆ. ಬದುಕು ಏನೆಂದು ಅರಿವಿಗೆ ಬರುವುದಕ್ಕೆ ಮುಂಚೆಯೇ ಹೇಗೆ ಮುಗಿದೇ ಹೋಗಿರುತ್ತದೆ ಅನ್ನುವುದನ್ನು ತಿಳಿಸಿರುವ ನೈಜ ಕಥೆ. ಅಂತ್ಯ ಭಾವನಾತ್ಮಕವಾಗಿದೆ.

—ವಿಜಯರಾವ್, ಬೆಂಗಳೂರು




## ಸೊಗಸಾದ ಉಕ್ತಿಗಳು

ಮನದ ಕದ ತಟ್ಟಿದ ಕಥೆ. ಇಡೀ ಜೀವನವನ್ನೇ ತನ್ನ ಸಂಸಾರಕ್ಕಾಗಿ ತೇಯುತ್ತಿರುವ ಎಲ್ಲ ಹೆಂಗಳೆಯರ ಕಥೆಯೂ ಹೌದು. ಮಗನು ತಾಯಿಯ ತೊಳಲಾಟ ಅರ್ಥ ಮಾಡಿಕೊಂಡದ್ದು ಸಂತಸ ತಂದಿತು. ಗಾಲಿಬ್ ಮತ್ತು ಗುಲ್ಜಾರರ ಉಕ್ತಿಗಳು ಕಥೆಯನ್ನು ತುಂಬ ಚಂದಗೊಳಿಸಿವೆ.

—ಶಾಂತಲಾ ರಾಜಗೋಪಾಲ್, ಬೆಂಗಳೂರು




## ಸಾಮಾಜಿಕ ಸ್ವಾಸ್ಥ್ಯ ಮುಖ್ಯ

‘ಯಾರು ಹಿತವರು?’ (ಅ. 26, ಗುರುರಾಜ್ ಎಸ್. ದಾವಣಗೆರೆ), ಈ ಪ್ರಶ್ನೆಗೆ ನಿಸ್ಸಂದೇಹವಾಗಿ ಉತ್ತರ ‘ಪ್ರತಿಯೊಂದು ಜೀವರಾಶಿ’. ಲೇಖನದಲ್ಲಿ ಜ್ವಲಂತ ಸಮಸ್ಯೆಯ ಬಗೆಗಿನ ಕಾಳಜಿ ಶ್ಲಾಘನೀಯ. ಪ್ರಾಣಿಗಳನ್ನು ಅವುಗಳ ಪಾಡಿಗೆ ಬದುಕಲು ಬಿಡದೆ ಅವುಗಳ ಜೀವನ ರೀತಿಯನ್ನು ಹಾಳುಗೆಡವುತ್ತಾ ನಾವೂ ಆರೋಗ್ಯಕ್ಕೆ ಸಮಸ್ಯೆ ತಂದುಕೊಳ್ಳುವುದು ಒಳಿತಲ್ಲ. ಸಾಮಾಜಿಕ ಸ್ವಾಸ್ಥ್ಯವೂ ಮುಖ್ಯ ಎಂಬುದನ್ನು ಎಲ್ಲರೂ ಕಂಡುಕೊಳ್ಳಬೇಕು.

—ನವೀನ್ ಕುಲಕರ್ಣಿ

## ಎಚ್ಚರಿಕೆಯ ಗಂಟೆ

ಖಗ–ಮೃಗಗಳ ಉಪಟಳದ ವಿಶ್ವರೂಪ ದರ್ಶನದಂತಿದೆ ಲೇಖನ. ಪ್ರಾಣಿ–ಪಕ್ಷಿಗಳನ್ನು ಸಾಕಿ ಸಲಹುವ ಸಹೃದಯರಿಗೆ ಎಚ್ಚರಿಕೆಯ ಗಂಟೆ.

ಕಳೆದ ವರ್ಷದ ಘಟನೆಯಿದು. ಸಂಜೆ ಮನೆಯಿಂದ ಅಂಗಡಿಗೆ ಹೋಗುತ್ತಿದ್ದಾಗ ಹುಡುಗಿಯೊಬ್ಬಳು ಎರಡು ನಾಯಿಗಳೊಂದಿಗೆ ಎದುರಾದಳು. ಅದರಲ್ಲಿ ಪುಟ್ಟ ನಾಯಿ ನನ್ನ ಮೇಲೆ ಎರಗಲು ಬಂತು. ಹೆದರಿದ ನಾನು ಕೆಳಗೆ ಬಿದ್ದೆ. ದವಡೆಯಿಂದ ರಕ್ತ ಬಳಬಳ ಸುರಿಯಿತು. ಆ ಹುಡುಗಿ ಮುಖದ ಮೇಲೆ ನಗು. ನಮ್ಮ ಮನೆ ಎದುರಿಗಿದ್ದವರು ನನ್ನನ್ನು ಆಸ್ಪತ್ರೆಗೆ ಸೇರಿಸಿದರು. ಆಸ್ಪತ್ರೆಯಲ್ಲಿ 14 ಚುಚ್ಚುಮದ್ದು, ಲೋಕಲ್ ಅನಸ್ತೇಶಿಯಾ ಕೊಟ್ಟರು. 25 ಸಾವಿರ ಖರ್ಚಾಯಿತು. ಪಡಬಾರದ ಬವಣೆ ಪಟ್ಟೆ. ಲೇಖನ ಈ ಘಟನೆಯನ್ನು ನೆನಪಿಸಿತು.

—ಕೆ.ಎಂ. ಮಧ್ವರಾಯ, ಬೆಂಗಳೂರು

## ಕ್ರೌರ್ಯವಲ್ಲವೇ?

ನಾಯಿ, ಕೋತಿ, ಪಾರಿವಾಳಗಳ ಉಪಟಳದ ಬಗ್ಗೆ ಲೇಖನ ಸವಿಸ್ತಾರವಾಗಿದೆ. ಆದರೆ ಮಾನವ ಪ್ರಾಣಿಯೂ ಅಪಾಯಕಾರಿಯೇ. ಪ್ರಾಣಿ, ಪಕ್ಷಿ, ಮನುಷ್ಯ–ಪ್ರಕೃತಿಯ ಅವಿಭಾಜ್ಯ ಅಂಗ. ಅವುಗಳ ಜನನ ಸಂಖ್ಯೆಯನ್ನು ನಿಯಂತ್ರಿಸಬೇಕೇ ಹೊರತು ಕೊಲ್ಲುವುದಾಗಲಿ, ಹಿಂಸಿಸುವುದಾಗಲಿ ಸಮಸ್ಯೆಗೆ ಪರಿಹಾರವಲ್ಲ. ನಮ್ಮ ಸ್ವಾರ್ಥದಿಂದ ಕಾಡೆಲ್ಲಾ ನಾಡಾಗಿರುವಾಗ ಮಂಗಗಳು ಬೇರೆಲ್ಲಿ ಹೋಗುತ್ತವೆ? ಬೀದಿ ನಾಯಿಗಳ ಪಾಡಂತೂ ಹೇಳುವುದೇ ಬೇಡ. ಅವಕ್ಕೆ ಆಹಾರ, ಪ್ರಕೃತಿಯಲ್ಲಿ ಸಿಗುತ್ತಿಲ್ಲ. ಹೀಗಿರುವಾಗ ಅವುಗಳಿಗೆ ಆಹಾರ ಕೊಡಬೇಡಿ, ಹಾಗೇ ರೋಗರುಜಿನಗಳಿಂದ ಸಾಯಲಿ ಎನ್ನುವುದು ಕ್ರೌರ್ಯವಲ್ಲವೇ?

—ಶ್ರೀನಿವಾಸ ಆರ್., ಮೈಸೂರು

## ಇಂಗಾಲದ ಕುರಿತು ಸ್ಪಷ್ಟ ಮಾಹಿತಿ

‘ಇಂಗಾಲದ ಡೈಆಕ್ಸೈಡ್ ಬಂಧನ’ (ಅ. 26, ಯು. ಶ್ರೀನಿವಾಸಮೂರ್ತಿ) ಲೇಖನ ಉತ್ತಮವಾಗಿದೆ. ಇಂಗಾಲದ ಅನಿಲ ವಿಷಕಾರಿ ಎನ್ನುವ ಪರಿಕಲ್ಪನೆ ತಪ್ಪು ಎಂದು ಸಾಬೀತು ಮಾಡಿ ಪರಿಸರದ ಸಮತೋಲನ ಕಾಪಾಡಲು ಇಂಗಾಲ ಅತ್ಯವಶ್ಯಕ ಎಂಬುದನ್ನು ಚೆನ್ನಾಗಿ ಮನವರಿಕೆ ಮಾಡಿಕೊಟ್ಟಿದೆ. ಆದರೆ ಇಂಗಾಲದ ಬಂಧನ ಹಾಗೂ ಕೃತಕ ಶೇಖರಣೆ ಸಂಶೋಧನೆಯ ಹಂತದಲ್ಲಿಯೇ ಇದ್ದು ದೊಡ್ಡ ಪ್ರಮಾಣದ ಉತ್ಪಾದನೆಗೆ ಬಹುರಾಷ್ಟ್ರೀಯ ಕಂಪನಿಗಳು ಹಣ ಹೂಡಲು ಆಸಕ್ತಿ ತೋರದಿರುವುದು ವಿಷಾದನೀಯ.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

## ‘ಹಸುರು ಪ್ರೀತಿ’ ಅಚ್ಚುಮೆಚ್ಚು

‘ಜೇಡ್; ಸಸ್ಯಲೋಕದ ಹಸುರ ವಜ್ರ’ (ಅ. 26, ಸೀಮಾ ಹೆಗಡೆ) ‘ಹಸುರು ಪ್ರೀತಿ’ಯ ಲೇಖನ ಇಷ್ಟವಾಯಿತು. ಒಳಾಂಗಣದಲ್ಲಿ ಬೆಳೆಸುವ ಸಕ್ಯುಲೆಂಟ್ ಗಿಡಗಳ ಗುಂಪಲ್ಲಿ ಜೇಡ್ ನನಗೆ ಅಚ್ಚುಮೆಚ್ಚು. ನಮ್ಮ ಮನೆಯಲ್ಲೂ ಬೋನ್ಸಾಯ್ ಮಾದರಿಯ ಎರಡು ಬಗೆಯ ಜೇಡ್ ಗಿಡಗಳಿವೆ.

— ಅನುಷ ಸುಪರ್ವ, ಹಾರೋಗೊಳಿಗೆ

## ಸರೋ‘ವರ’

‘ಮಾನಸ ಸರೋವರ ಅಲ್ಲೋಲ ಕಲ್ಲೋಲ’ (ಅ. 12, ಡಾ. ಶಿವಾನಂದ ಬಿ. ಹಿರೇಮಠ) ಲೇಖನಕ್ಕೆ ಪ್ರತಿಕ್ರಿಯೆ...

ಎಳೆಯರಾಗಲಿ ‘ಹಳೆಯ’ರಾಗಲಿ,
ಮಾನಸ ಸರೋವರ ಪ್ರಕ್ಷುಬ್ಧವಾಗದೆ
ಸುಶಾಂತವಾಗಿರುವುದು ದೇವರ ‘ವರ’ವೇ ಸರಿ!

—ಸಿಪಿಕೆ, ಮೈಸೂರು

## ಮನೆಮದ್ದುಗಳು ಮರೆಯಾಗದಿರಲಿ

‘ಆರೋಗ್ಯವರ್ಧಕ ಹರಳು’ (ಅ. 12, ಯು. ಅನಂತ್), ಹರಳೆಣ್ಣೆ ಕುರಿತ ಲೇಖನ ಉಪಯುಕ್ತವಾಗಿದೆ. ನಾವು ಚಿಕ್ಕವರಿದ್ದಾಗ ನಮ್ಮ ಸೋದರತ್ತೆ, ‘ವಾರಕ್ಕೊಮ್ಮಿ ಔಡ್ಲೆಣ್ಣೀನ ಒಂದರ್ಧ ಚಮಚಾ ಉಗುರ್ ಬೆಚ್ಚನ ನೀರಾಗ ಹಾಕ್ಕೊಂಡು ಕುಡಿಬೇಕ್ರೆ. ಹೊಟ್ಟಿ ಝಾಡ್ಸಿ, ಹೊಟ್ಟ್ಯಾನ ಹೊಲ್ಸೆಲ್ಲಾ ಹೊರಗ ಹೋಗ್ತದ’ ಎನ್ನುತ್ತಿದ್ದಳು. ಒತ್ತಾಯದಿಂದ ಮೂಗು ಒತ್ತಿಹಿಡಿದು ಕುಡಿಸುತ್ತಿದ್ದಳು. ನಾವೆಲ್ಲ ಅವಳ ಕೈಯಿಂದ ಬಿಡಿಸಿಕೊಂಡು ಮುಖ ಕಿವುಚಿ ಓಡಿಹೋಗುತ್ತಿದ್ದೆವು. ಇತ್ತೀಚೆಗೆ ಇಂಥ ಮನೆ ಮದ್ದುಗಳನ್ನು ಮರೆತೇಬಿಟ್ಟಿದ್ದೇವೆ. ಇಂದಿನ ಮಕ್ಕಳು ಹಲವು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ಕಾಣುತ್ತಿದ್ದೇವೆ.

—ಬಿಜೆ ಪಾರ್ವತಿ ವಿ. ಸೋನಾರೆ, ಬೀದರ್

## ಮೂವರ ಮೋಡಿ

ಮೋಹನ್ ಪ್ರಸಾದ್ ಅವರ ‘ಆಪರೇಷನ್ ಅಮ್ಮು’ ಧಾರಾವಾಹಿ ಬಹಳ ಚೆನ್ನಾಗಿತ್ತು. ಕುತೂಹಲ ಹುಟ್ಟಿಸುತ್ತಾ ಸಾಗಿ ಸಿನಿಮಾದಂತಿತ್ತು. ಮಾಯಣ್ಣನ ತನಿಖಾ ರೀತಿ ಸೊಗಸಾಗಿತ್ತು. ಮೋನಪ್ಪ ಅವರ ಚಿತ್ರಗಳು ಸನ್ನಿವೇಶಗಳಿಗೆ ಸೂಕ್ತವಾಗಿತ್ತು. ಮೋಹನ್, ಮಾಯಣ್ಣ, ಮೋನಪ್ಪ ಮೂವರೂ ಮೋಡಿ ಮಾಡಿದರು.

—ನಾ.ರಾ. ಜ್ಯೋತಿ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in